**ದಿಃ 26-11-2021 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ 2 ಮತ್ತು 4 ನೇ ಪ್ರತಿವಾದಿಯ ಪರಃ ಶ್ರೀ ಎಂ ಸಿ ಟಿ ಎಂ ವಕೀಲರಿಂದಃ**

ಸಿದ್ದಮ್ಮಳು ಕೆಂಚಪ್ಪನ ಹಿರಿಯ ಮಗಳು ಎಂದರೆ ಸರಿ. 1960 ನೇ ಸಾಲಿನಲ್ಲಿ ಗೂಳಿಹೊಸಳ್ಳಿ ಗ್ರಾಮದ ಕರಿಯಪ್ಪ ಎಂಬುವರಿಗೆ ಮದುವೆ ಮಾಡಿಕೊಡಲಾಗಿದೆ ಎಂದರೆ ಸರಿ. ಸಿದ್ದಮ್ಮಳ ಮಾವನ ಹೆಸರು ಹನುಮಪ್ಪ ಎಂದರೆ ಸರಿ. ಹನುಮಪ್ಪನಿಗೆ ಒಟ್ಟು 7 ಜನ ಮಕ್ಕಳು ಎಂದರೆ ಸರಿ. 5 ಜನ ಹೆಣ್ಣು ಮಕ್ಕಳು ಮತ್ತು 2 ಜನ ಗಂಡು ಮಕ್ಕಳು ಎಂದರೆ ಸರಿ. ದ್ಯಾಮಕ್ಕ, ಶಾಂತಮ್ಮ, ನಿಂಗಮ್ಮ, ಬಸಮ್ಮ, ಲಕ್ಷ್ಮಮ್ಮಕ್ಕ ಮತ್ತು ಗಂಡು ಮಕ್ಕಳು ಹೆಸರು ತಿಮ್ಮಪ್ಪ ಮತ್ತು ಕರಿಯಪ್ಪ ಎಂದರೆ ಸರಿ. ಮದುವೆಯಾದ ನಂತರ ಸಿದ್ದಮ್ಮ ಗೂಳಿಹೊಸಳ್ಳಿ ಗ್ರಾಮದಲ್ಲಿ ವಾಸ ಇರಲು ಪ್ರಾರಂಭಿಸಿದಳು ಎಂದರೆ ಸರಿಯಲ್ಲ. ಆಕೆ ಅವಳು ಅಲ್ಲಿ ಹೋಗಿಯೇ ಇಲ್ಲ ಅನ್ನುತ್ತಾರೆ. ಆಕೆ ಅಲ್ಲಿ ಹೋದ ನಂತರ 1963 ರಲ್ಲಿ ದುರ್ಗಪ್ಪನ ಮಕ್ಕಳು ಅಂದರೆ ಸಿದ್ದಮ್ಮಳ ಮಾವನ ಮನೆಯಲ್ಲಿ ಪಾಲುವಿಭಾಗ ಆಯಿತು ಎಂದರೆ ನನಗೆ ಗೊತ್ತಿಲ್ಲ. ಆ ಪಾಲುವಿಭಾಗದಲ್ಲಿ ಸಿದ್ದಮ್ಮ ಮತ್ತು ಕರಿಯಪ್ಪನಿಗೆ 8 ಎಕರೆ ಜಮೀನು ಬಂತ್ತು ಎಂದರೆ ಸರಿಯಲ್ಲ. ಮತ್ತು ನನಗೆ ಗೊತ್ತಿಲ್ಲ ಅನ್ನುತ್ತಾರೆ. ಆ 8 ಎಕರೆ ಜಮೀನಿನಲ್ಲಿ ಸಿದ್ದಮ್ಮ ಮತ್ತು ಕರಿಯಪ್ಪ ಇಬ್ಬಳು ಉಳುಮೆ ಮಾಡಿಕೊಂಡು ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ.

ಸಿದ್ದಮ್ಮ ಮತ್ತು ಕರಿಯಪ್ಪ ಇವರಿಗೆ ಒಬ್ಬ ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳು ಎಂದರೆ ಸರಿ. ಗಂಡು ಮಗನ ಹೆಸರು ಮಂಜುನಾಥ ಎಂದರೆ ಸರಿ. ಹೆಣ್ಣು ಮಕ್ಕಳು ಬಸಮ್ಮ ಮತ್ತು ಪಾರ್ವತಮ್ಮ. ಪಾರ್ವತಮ್ಮಳನ್ನು 1 ನೇ ಪ್ರತಿವಾದಿ ಮದುವೆಯಾಗಿದ್ದಾರೆ ಎಂದರೆ ಸರಿ. ಸರ್ವೆ ನಂ.101/3 ಕ್ಷೇತ್ರ 1 ಎಕರೆ 5 ಗುಂಟೆ ದಾವಾ ಷೆಡ್ಯೂಲ್ ಐಟಂ ನಂ.3 ಸಿದ್ದಮ್ಮ ಅಂದರೆ 2 ನೇ ಪ್ರತಿವಾದಿ ಖರೀದಿಸಿದ್ದಾಳೆ ಎಂದರೆ ಸರಿಯಲ್ಲ. ಅದು ಆಗಿನ ಕಾಲಕ್ಕೆ 1989 ರಲ್ಲಿ 5 ಸಾವಿರ ರೂ. ಬೆಲೆ ಬಾಳುತ್ತಿತ್ತುಎಂದರೆ ನನ್ನ ತಂದೆ ಖರೀದಿಸಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂ.94/2, ಐಟಂ ನಂ.11 ಸಿದ್ದಮ್ಮಳೇ 7 ಎಕರೆ 20 ಗುಂಟೆ 1,80,000/- ರೂ. ಖರೀದಿಸಿದ್ದಾಳೆ ಎಂದರೆ ಸರಿಯಲ್ಲ. ನನ್ನ ಅಣ್ಣ ಖರೀದಿಸಿದ್ದಾನೆ ಅನ್ನುತ್ತಾರೆ. ಸದರಿ ಆಸ್ತಿಯನ್ನು ಸಿದ್ದಮ್ಮ ಸ್ವಂತ

ದುಡಿಮೆಯಿಂದ ಖರೀದಿಸಿದ್ದಾಳೆ ಎಂದರೆ ಸರಿಯಲ್ಲ. ತನ್ನ ಗಂಡನ ಮನೆಯಲ್ಲಿ ವಿಭಾಗ ಆಗಿ ತನ್ನ ಗಂಡನಿಗೆ ಬಂದ 8 ಎಕರೆ ಆಸ್ತಿಯಲ್ಲಿ ದುಡಿದು ಈ ಐಟಂ ನಂ.11 ನೇ ಆಸ್ತಿ ಖರೀದಿಸಿದ್ದಾಳೆ ಎಂದರೆ ಸರಿಯಲ್ಲ. ದಿಃ22-09-1997 ರಂದು ಇದೇ ಸಿದ್ದಮ್ಮ ಐಟಂ ನಂ.12 ನೇ ಆಸ್ತಿಯನ್ನು ಖರೀದಿಸಿದ್ದಾಳೆ ಎಂದರೆ ಸರಿಯಲ್ಲ. ಅದನ್ನು ನನ್ನ ಅಣ್ಣ ಖರೀದಿಸಿದ್ದಾರೆ ಅನ್ನುತ್ತಾರೆ. ಸದರಿ ಆಸ್ತಿಯನ್ನು ಸ್ವಂತ ದುಡಿಮೆಯಿಂದ ಖರೀದಿಸಿದ ಆಸ್ತಿ ಎಂದರೆ ಸರಿಯಲ್ಲ. ಆ ರೀತಿ ಸ್ವಂತ ಆಸ್ತಿ ಆದ್ದರಿಂದ ತನ್ನ ಮೊಮ್ಮಗ ಉದಯಕುಮಾರನಿಗೆ ದಾನಪತ್ರ ಮಾಡಿದ್ದಾಳೆ ಎಂದರೆ ಸರಿಯಲ್ಲ. 2015-16 ರಲ್ಲಿ ದಾನಪತ್ರ ಆಯಿತು ಎಂದರೆ ಸರಿಯಲ್ಲ . ಈ ಮೂರು ಆಸ್ತಿಗಳನ್ನು ಸಿದ್ದಮ್ಮ ತನ್ನ ಸ್ವಂತ ದುಡಿಮೆಯಿಂದ ಖರೀದಿಸಿದ ಆಸ್ತಿಗಳು ಎಂದರೆ ಸರಿಯಲ್ಲ. ಈ ಆಸ್ತಿಗಳಲ್ಲಿ ಹೊರತುಪಡಿಸಿ ಬೇರೆ ಯಾರಿಗೂ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸಿದ್ದಯ್ಯನು ಎಸ್ ಜೆ ಎಂ ಕಾಲೇಜಿನಲ್ಲಿ ಪ್ರೊಫೇಸರ್ ಎಂದರೆ ಸರಿ. ಅವರಿಗೆ ಸ್ವಂತ ದುಡಿಮೆ ಇದೆ ಎಂದರೆ ಸರಿ. ಅವರು ಚಿತ್ರದುರ್ಗದಲ್ಲಿ ವಾಸ ಇದ್ದಾರೆ ಎಂದರೆ ಸರಿ .

**ಉಳಿದಂತೆ 1 ಮತ್ತು 3 ನೇ ಪ್ರತಿವಾದಿಯರ ಪರ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ